**ಸಾಕ್ಷಿಯನ್ನು ದಿಃ12.01.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಹೊಗೆಸೊಪ್ಪು ಬೆಳೆದರೆ ತಂಬಾಕು ಮಂಡಳಿಗೆ ಅದನ್ನು ಮಾರಬೇಕು ಎಂದರೆ ಸರಿ. ಆ ರೀತಿ ಮಾರಾಟ ಮಾಡಿದಾಗ ಅವರು ಓಚರ್ ಕೊಡುತ್ತಾರೆ ಎಂದರೆ ಸರಿ. ಓಚರ್ ಗಳಲ್ಲಿ ತೂಕ ಹಾಗೂ ಮೊತ್ತವನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ.

2. 2021 ರಲ್ಲಿ ನೀವು ತಂಬಾಕು ಬೆಳೆದ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ.

3. ತಂಬಾಕು ಮಾರಿದರೆ ಬ್ಯಾಂಕ್ ಖಾತೆಗೆ ಹಣ ಬರುತ್ತದೆ ಎಂದರೆ ಸರಿ.

4. ಸೊಸೈಟಿಯಲ್ಲಿ ಪ್ರತಿವರ್ಷ ಬೆಳೆಸಾಲ ನೀಡುತ್ತಾರೆ ಎಂದರೆ ಸರಿ.

5. 2021 ರಲ್ಲಿ ಸೊಸೈಟಿಯಲ್ಲಿ 1.5 ರಿಂದ 2 ಲಕ್ಷದವರೆಗೆ ಸಾಲ ಪಡೆದಿದ್ದೆ.

6. 2021 ರಲ್ಲಿ 800 ಕೆ.ಜಿ ತಂಬಾಕು ಒಟ್ಟು 1.5 ರಿಂದ 2 ಲಕ್ಷದ ತಂಬಾಕು ಬೆಳೆದಿದ್ದೆ. ಆ ಬಗ್ಗೆ ಖಾತೆಗೆ ಹಣ ಬಂದ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

7. ಸೊಸೈಟಿಯಲ್ಲಿ ಸಾಲ ಪಡೆದಿದ್ದರೆ, ತಂಬಾಕು ಹಣ ಬಂದ ನಂತರ ಸಾಲ ವಜಾ ಮಾಡಿಕೊಂಡು ಉಳಿಕೆ ಹಣ ನೀಡುತ್ತಾರೆ ಎಂದರೆ ಸರಿ.

8. 2021 ರಲ್ಲಿ ಎಷ್ಟು ಉಳಿಕೆ ಹಣ ಪಡೆದಿದ್ದೀರಿ ಎಂದರೆ, 1 ಲಕ್ಷ ನೀಡಿದ್ದರು. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

9. ನಿಮಗೆ 2021 ರಲ್ಲಿ ನಿಮ್ಮ ಸಾಲ ವಜಾ ಆಗಿ 1 ಲಕ್ಷ ಹಣ ನೀಡಿಲ್ಲ ಎಂದರೆ ಸರಿಯಲ್ಲ.

10. 2021 ರಲ್ಲಿ ನಿಮ್ಮ ಬಳಿ 1 ಲಕ್ಷ 80 ಸಾವಿರ ಹಣ ಇರಲಿಲ್ಲ ಎಂದರೆ ಸರಿಯಲ್ಲ.

11. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ, ನೊಟೀಸಿನಲ್ಲಿ ಹಾಗೂ ದಾವೆಯಲ್ಲಿ ಅಗ್ರಿಮೆಂಟ್ ಪ್ರಕಾರ ಎಷ್ಟು ವಾಯಿದೆ ಬರೆಸಿಲ್ಲ ಎಂದರೆ ಸರಿಯಲ್ಲ.

12. ನೊಟೀಸಿನಲ್ಲಿ ವಾಯಿದೆ ನಮೂದು ಮಾಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

13. ದಾವೆ ಹಾಕಬೇಕಾದರೆ ವಾದತ್ರದಲ್ಲಿ ಸುಳ್ಳು ಕ್ರಯ ಕರಾರು ಪತ್ರದ ಸಂಪೂರ್ಣ ಅಂಶಗಳನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ.

14. ಕರಾರು ಪತ್ರ ಮಾಡಿಸಬೇಕಾದರೆ ಎಷ್ಟು ರೂಪಾಯಿ ಸ್ಟಾಂಪ್ ಮೇಲೆ ಮಾಡಿಸಬೇಕು ಎಂಬ ವಿಚಾರ ನನಗೆ ಗೊತ್ತು.

15. ನಿಮ್ಮ ಸುಳ್ಳು ಕ್ರಯ ಕರಾರು ಪತ್ರ 100 ರೂಪಾಯಿಯ ಸ್ಟಾಂಪ್ ಪೇಪರ್ ಮೇಲೆ ಇದೆ ಎಂದರೆ ಸರಿ.

16. 100 ರೂಪಾಯಿ ಸ್ಟಾಂಪ್ ಮೇಲೆ ಕ್ರಯ ಕರಾರು ಪತ್ರ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

17. ನಿಮ್ಮ ಸುಳ್ಳು ಕ್ರಯ ಕರಾರು ಪತ್ರದಲ್ಲಿ 1 ಲಕ್ಷ 80 ಸಾವಿರ ಮೊತ್ತ ನಮೂದು ಮಾಡಿದ್ದೀರಾ ಎಂದರೆ ಸರಿ.

18. ನೀವು ಹಾಜರುಪಡಿಸಿರುವ ಪತ್ರ ಕೊರತೆ ಸ್ಟಾಂಪ್ ಡ್ಯೂಟಿಯಿಂದ ಕೂಡಿದೆ ಎಂದರೆ ಸರಿಯಲ್ಲ. ಸದರಿ ಪತ್ರದ ಪ್ರಕಾರ ನೀವು ಕಾನೂನು ಪ್ರಕಾರ ದಾವೆ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ.

19. ತಿಮ್ಮೇಗೌಡ ಬಿನ್ ತಮ್ಮೇಗೌಡ ನಿಮ್ಮ ಊರಿನವರು ಎಂದರೆ ಸರಿ. ಪುಟ್ಟೇಗೌಡ ಕೆ.ಎಸ್ ನಿಮ್ಮ ಸ್ವಂತ ಅಣ್ಣ ಎಂದರೆ ಸರಿ.

20. ನಿಪಿ-1 ನ್ನು ಮಧುಸೂದನ ವಕೀಲರ ಕಛೇರಿಯಲ್ಲಿ ಬರೆಯಲಾಗಿದೆ.

21. ತಿಮ್ಮೇಗೌಡ, ಪುಟ್ಟೇಗೌಡ ಹಾಗೂ ಮಧುಸೂದನ ರವರನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ.

22. ನಿಮ್ಮ ಊರಿನ ತಿಮ್ಮೇಗೌಡರ ಪತ್ನಿ ರತ್ನಮ್ಮ ಗೊತ್ತಾ ಎಂದರೆ, ಗೊತ್ತಿಲ್ಲ.

23. ದಾವಾ ಸ್ವತ್ತಿನ ಪಹಣಿ ಸದರಿ ರತ್ನಮ್ಮ ಕೋಂ ತಿಮ್ಮೇಗೌಡರ ಹೆಸರಿನಲ್ಲಿ ನಮೂದಾಗಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

24. ರತ್ನಮ್ಮ ಕೋಂ ತಿಮ್ಮೇಗೌಡರವರು ನಿಮ್ಮ ಅಣ್ಣ ಜಯಣ್ಣ ರವರಿಂದ ಖರೀದಿ ಮಾಡಿದ ನಂತರ ತಾಲೂಕು ಕಛೇರಿಗೆ ಖಾತೆ ಮಾಡದಂತೆ ತಕರಾರು ನೀಡಿದ್ದೀರಿ ಎಂದರೆ ನನಗೆ ಗೊತ್ತಿಲ್ಲ.

25. ಸದರಿ ತಕರಾರಿನಲ್ಲಿ ನಿಮ್ಮ ಸಹಿ, ನಿಮ್ಮ ವಕೀಲರ ಸಹಿ ಹಾಗೂ ವಕಾಲತ್ ಇದೆ ಎಂದರೆ ಸರಿ. ನೀವು ತಕರಾರು ಹಾಕಿದರೂ ಸಹ ರತ್ನಮ್ಮ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

26. ರತ್ನಮ್ಮ ರವರು ರೂಪಾ ಎಂಬುವವರಿಗೆ 15 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

27. ಸಾಕ್ಷಿ ತಿಮ್ಮೇಗೌಡರು ಸದರಿ ರತ್ನಮ್ಮ ಹಾಗೂ ರೂಪಾರವರ ಮೇಲೆ ಕೇಸ್ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸ್ ಮಾನ್ಯ ಹೆಚ್ಚುವರಿ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ.

28. ನಿಮ್ಮ ಸುಳ್ಳು ಕರಾರು ಪತ್ರದ ದಿಃ 01.02.2021 ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿ ದಿಃ 01.02.2021 ರಿಂದ 3 ವರ್ಷದ ಒಳಗೆ ಎಂದು ನಮೂದು ಇದೆ ಎಂದರೆ ಸರಿ. ಸದರಿ ಕರಾರು ಪತ್ರದ ಪ್ರಕಾರ 3 ವರ್ಷದ ಒಳಗೆ ಬರೆದುಕೊಡದಿದ್ದರೆ ಮುಂಗಡ ಹಣದ 2 ಪಟ್ಟು ಹಣವನ್ನು ಕೊಡತಕ್ಕದ್ದು ಎಂದು ನಮೂದು ಇದೆ ಎಂದರೆ ಸರಿ.

29. ಸದರಿ ವಿಚಾರವನ್ನು ನಿಮ್ಮ ವಾದಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಆ ರೀತಿ ನಮೂದು ಮಾಡಲು ತೊಂದರೆ ಇತ್ತಾ ಎಂದರೆ, ಇರಲಿಲ್ಲ.

30. ತಮ್ಮೇಗೌಡ ಮತ್ತು ಜಯಣ್ಣ ರವರಿಗೆ ಸುಮಾರು ವರ್ಷದಿಂದ ಮಾತುಕತೆ ಇಲ್ಲ ಎಂದರೆ ಸರಿ.

31. ಪುಟ್ಟೇಗೌಡ ಹಾಗೂ ಪ್ರತಿವಾದಿಗೆ ಸಹ ಮನಸ್ತಾಪ ಇದೆ ಎಂದರೆ ಸರಿಯಲ್ಲ.

32. ಸಾಕ್ಷಿಗೆ ಲಿಖಿತ ಹೇಳಿಕೆ, ವಕಾಲತ್ ನಲ್ಲಿರುವ ಸಹಿಗಳನ್ನು ತೋರಿಸಲಾಗಿ ಅದನ್ನು ಪ್ರತಿವಾದಿಯರ ಸಹಿ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

33. ನಿಪಿ - 1 ರಲ್ಲಿರುವ ಪ್ರತಿವಾದಿಯ ಸಹಿಗಳನ್ನು ನೋಡಿ ಸಾಕ್ಷಿ ಜಯಣ್ಣ ರವರ ಸಹಿಗಳು ಎಂದು ನುಡಿಯುತ್ತಾರೆ. ಸದರಿ ನಿಪಿ - 1 ರಲ್ಲಿರುವ ಸಹಿಗೆ ಹಾಗೂ ಪ್ರತಿವಾದಿಯ ಲಿಖಿತ ಹೇಳಿಕೆ, ವಕಾಲತ್ ನಲ್ಲಿರುವ ಸಹಿಗಳಿಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

34. ನಿಪಿ - 1 ಕ್ಕೆ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ, ಮಾಡಿದ್ದಾರೆ.

35. ನಿಪಿ - 1 ನ್ನು ಹಾಗೂ ಪ್ರತಿವಾದಿಯ ಲಿಖಿತ ಹೇಳಿಕೆ, ವಕಾಲತ್ ನಲ್ಲಿರುವ ಸಹಿಗಳನ್ನು ಬೆರಳಚ್ಚು ತಜ್ಞರಿಗೆ ಕಳುಹಿಸಲು ನಿಮಗೆ ತಕರಾರು ಇದೆಯಾ ಎಂದರೆ, ಇಲ್ಲ.

36. ನಿಪಿ - 1 ರಲ್ಲಿನ ಪ್ರತಿವಾದಿಯ ಸಹಿಗಳನ್ನು ನೀವೇ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

37. ದಿಃ 11.01.2022 ರಲ್ಲಿ ಪ್ರತಿವಾದಿಯು ರತ್ನಮ್ಮ ಕೋಂ ತಿಮ್ಮೇಗೌಡರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ನಂತರ ನೀವು ಈ ದಾವೆ ಹಾಕಿದ್ದೀರಾ ಎಂದರೆ, ನನಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

38. ಜಯಣ್ಣ ರವರು ನಿಮಗೆ ಮಾರಾಟ ಮಾಡದೇ ರತ್ನಮ್ಮ ರವರಿಗೆ ಮಾರಾಟ ಮಾಡಿದರು ಎಂಬ ದ್ವೇಷದಿಂದ ಸುಳ್ಳು ಕರಾರು ಪತ್ರ ಸೃಷ್ಠಿ ಮಾಡಿ ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

39. ದಾವಾ ಸ್ವತ್ತು ಈಗ ರತ್ನಮ್ಮ ರವರ ಹೆಸರಿನಲ್ಲಿದ್ದು, ಅವರೇ ಮಾಲೀಕರು ಹಾಗೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

40. ರತ್ನಮ್ಮ ರವರಿಗೆ ಮಾರಾಟ ಮಾಡಿದ ನಂತರ ನೀವು ತಕರಾರು ಹಾಕಿ, ಅವರ ಹೆಸರಿಗೆ ಖಾತೆ ಆಗುವ ಸಮಯದಲ್ಲಿ ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

41. ನೊಟೀಸು ನೀಡಿದ ನಂತರ ಪ್ರತಿವಾದಿ ನಿಮಗೆ ಪ್ರತ್ಯುತ್ತರ ನೀಡಿದ್ದಾರೆ ಎಂದರೆ ಸರಿ.

42. ನಿಮ್ಮ ಮತ್ತು ನಿಮ್ಮ ಅಣ್ಣ ಜಯಣ್ಣ ರವರ ನಡುವೆ ಯಾವುದೇ ಕ್ರಯದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

43. ತಿಮ್ಮೇಗೌಡ ಹಾಗೂ ಪುಟ್ಟೇಗೌಡ, ನೀವು ಸೇರಿ ಸುಳ್ಳು ಕ್ರಯ ಕರಾರು ಪತ್ರ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

44. ನಿಮ್ಮ ಹಾಗೂ ಪ್ರತಿವಾದಿ ನಡುವೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲ ಹಾಗೂ ಅವರು ನಿಮ್ಮಿಂದ 1 ಲಕ್ಷ 70 ಸಾವಿರ ಮುಂಗಡ ಹಣವನ್ನು ಸಾಕ್ಷಿಗಳ ಸಮಕ್ಷಮ ಪಡೆದಿಲ್ಲ ಎಂದರೆ ಸರಿಯಲ್ಲ.

45. ಪ್ರತಿವಾದಿ ನಿಮಗೆ ಯಾವುದೇ ಕರಾರು ಪತ್ರ ಮಾಡಿಲ್ಲ ಹಾಗೂ ಸಹಿ ಸಹ ಮಾಡಿಲ್ಲ ಎಂದರೆ ಸರಿಯಲ್ಲ.

46. ನಿಪಿ - 1 ರಂತೆ ಸುಳ್ಳು ಕ್ರಯ ಕರಾರು ಪತ್ರ ಸೃಷ್ಠಿ ಮಾಡಿದ್ದೀರಾ ಎಂದು ಪ್ರತಿವಾದಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿ. ಆದರೆ ಪೊಲೀಸರು ದೂರು ಪಡೆಯದೆ ನ್ಯಾಯಾಲಯಕ್ಕೆ ಹೋಗುವಂತೆ ಹಿಂಬರಹ ನೀಡಿದ್ದರು ಎಂದರೆ ಸರಿ.

47. ರಾಜಕೀಯ ಪ್ರಭಾವದಿಂದ ನೀವು ಹಾಗೂ ಸಾಕ್ಷಿಗಳು ಸದರಿ ದೂರನ್ನು ಮುಕ್ತಾಯಗೊಳಿಸಿದ್ದೀರಾ ಎಂದರೆ ಸರಿಯಲ್ಲ.

48. ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂಬ ಕಾರಣಕ್ಕೆ ನಿಮ್ಮ ಅಣ್ಣನ ಮೇಲೆ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

49. ಈಗಲೂ ಸಹ ನಿಮ್ಮ ಅಣ್ಣ ಪೊಲೀಸ್ ಠಾಣೆಗೆ ಬಂದಾಗ ನೀನು ಸುಮ್ಮನಿದ್ದು ಬಿಡು ನಾವು ದಾವಾ ಆಸ್ತಿ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದೀರಾ ಎಂದರೆ ಸರಿಯಲ್ಲ.

50. ರತ್ನಮ್ಮ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಮಾರಾಟ ಮಾಡಿದ ಬಗ್ಗೆ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಏನು ತಕರಾರು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

51. ಈ ದಾವೆಯಲ್ಲಿ ರತ್ನಮ್ಮ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲದ ಕಾರಣ ಈ ದಾವೆ ಊರ್ಜಿತವಲ್ಲ ಎಂದರೆ, ಆ ವಿಚಾರ ನನಗೆ ಗೊತ್ತಿಲ್ಲ.

52. ನೀವು ಸತ್ಯವನ್ನು ಮರೆಮಾಚಿ ಸುಳ್ಳು ಕ್ರಯ ಕರಾರು ಪತ್ರ ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ